# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

## "ಜ್ಞಾನ ಸಂಗಮ" ಬೆಳಗಾವಿ-590 018, ಕರ್ನಾಟಕ ರಾಜ್ಯ

*ಕುಲಸಚಿವರು*

*ದೂರವಾಣಿ ಸಂ. (0831) 2405468*
*ಫ್ಯಾಕ್ಸ್ ಸಂ. (0831) 2405467*


Ref. No. VTU/BGM/RE/MAINT/2017-2018/IFT No. 6/ 83 Date: 5 JUN 2017

**ಅಲ್ಪಾವಧಿ ಟೆಂಡರ ಪ್ರಕಟಣೆ-3ನೇ ಕರೆ**

**ವಿಷಯ: ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪೂರೈಸುವ ಸಲುವಾಗಿ ದರಪಟ್ಟಿಗಳ ಆಹ್ವಾನ**

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ "ಜ್ಞಾನ ಸಂಗಮ", ಬೆಳಗಾವಿ ಕಚೇರಿಗೆ ಸನ್ 2017-18ನೇ ಸಾಲಿನ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪೂರೈಸುವ ಸಲುವಾಗಿ ದರಪಟ್ಟಿಗಳನ್ನು ಕುಲಸಚಿವರು, ವಿತಾವಿ, ಬೆಳಗಾವಿ ಇವರು ಈ ಕೆಳಗಿನಂತೆ ಆಹ್ವಾನಿಸಿರುತ್ತಾರೆ.

| ಅ. ಸಂ | ಕಚೇರಿ | ಬಾಡಿಗೆಗೆ ವಾಹನಗಳ ವಿವರ | ಗುತ್ತಿಗೆ ಅವಧಿ | ಅರ್ಜಿ ಶುಲ್ಕ ರೂ. | ಟೆಂಡರ್ ಮೊತ್ತ | ಇ.ಎಂ.ಡಿ | ಭದ್ರತಾ ಠೇವಣಿ |
|---|---|---|---|---|---|---|---|
| 1 | ವಿ.ತಾ.ವಿ ಪ್ರಧಾನ ಕಚೇರಿ, ಬೆಳಗಾವಿ. | ಟಾಟಾ ಇಂಡಿಕಾ, ಇನ್ನೋವಾ, ಟವೆರಾ, ಕ್ವಾಲಿಸ್, ಟಾಟಾ ಸುಮೋ/ಟವೇರಾ, ಲಾರಿ. | ಒಂದು ವರ್ಷ | 600.00 | 600000 | 15000 | 30000 |

ಸೂಚಿಪಟ್ಟಿ : -

| | | |
|---|---|---|
| 1 | ಟೆಂಡರ ಪ್ರಕ್ರಿಯೆ ಪ್ರಾರಂಭದ ದಿನಾಂಕ | : 05/06/2017 |
| 2 | ಖಾಲಿ ಟೆಂಡರ ಫಾರ್ಮ ಪಡೆಯಲು ಕೊನೆಯ ದಿನಾಂಕ | : 12/06/2017 ಸಂಜೆ 5.30 ರ ವರೆಗೆ |
| 3 | ಭರ್ತಿ ಮಾಡಿದ ಟೆಂಡರುಗಳನ್ನು ಸಲ್ಲಿಸುವ ದಿನಾಂಕ | : 16/06/2017 ಸಂಜೆ 4.00 ವರೆಗೆ |
| 4 | ಟೆಂಡರುಗಳನ್ನು ತೆರೆಯುವ ದಿನಾಂಕ | : 19/06/2017 ಸಂಜೆ 4.30 ಗಂಟೆಗೆ |

**ಕರಾರು ಮತ್ತು ಸೂಚನೆಗಳು:-**

1. ಅರ್ಹ ಬಿಡ್ಡುದಾರರು ನೋಂದಣೀಕೃತ ಟೂರ್ಸ್ ಆ್ಯಂಡ್ ಟ್ರ್ಯಾವೆಲ್ಸ್‌ದಾರರಿಂದ ಪರವಾಣಿಗೆ ಹೊಂದಿದವರಾಗಿರಬೇಕು.
2. ಟೆಂಡರ ಫಾರ್ಮಗಳ ಮೇಲೆ **"ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪೂರೈಸುವ ಸಲುವಾಗಿ ದರಪಟ್ಟಿಗಳ ಆಹ್ವಾನ"** ಎಂಬ ಮೇಲ್ಬರಹದೊಂದಿಗೆ ಕುಲಸಚಿವರು, ವಿತಾವಿ, "ಜ್ಞಾನ ಸಂಗಮ", ಬೆಳಗಾವಿ ಇವರಿಗೆ ಸಲ್ಲಿಸತಕ್ಕದ್ದು.
3. ಖಾಲಿ ಟೆಂಡರ ಫಾರ್ಮ ಪಡೆಯಲು ಪ್ರತಿಯೊಂದಕ್ಕೆ ರೂ. 600 ಗಳನ್ನು ವಿತ್ತಾಧಿಕಾರಿಗಳು ವಿತಾವಿ, ಬೆಳಗಾವಿ ಇವರ ಹೆಸರಿನಲ್ಲಿ ರಾಷ್ಟ್ರೀಕೃತ/ಶೆಡ್ಯೂಲ್ಡ ಬ್ಯಾಂಕಿನಿಂದ ಡಿ.ಡಿ. ಪಡೆದು ಅರ್ಜಿಯ ಜೊತೆಗೆ ಲಗತ್ತಿಸತಕ್ಕದ್ದು.
4. ಅರ್ಹ ಬಿಡ್ಡುದಾರರು ದರಪಟ್ಟಿ ಸಲ್ಲಿಸುವ ವೇಳೆಯಲ್ಲಿ ಇಂಧನ ವೆಚ್ಚ ಸೇರಿ ಎಲ್ಲಾ ತೆರಿಗೆ ಮತ್ತು ಚಾಲಕನ ದಿನಭತ್ಯೆ ಸೇರಿಸಿ ಟೆಂಡರಗಳನ್ನು ಭರ್ತಿ ಮಾಡಿ ಸಲ್ಲಿಸುವುದು.
5. ಯಾವುದೇ ಟೆಂಡರನ ಮಾಹಿತಿ ಅಪೂರ್ಣವಿದ್ದಲ್ಲಿ ಸದರಿ ಟೆಂಡರನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕನ್ನು ಈ ಕೆಳಕಂಡ ಅಧಿಕಾರಿಗಳು ಹೊಂದಿರುತ್ತಾರೆ.
6. ಆಸಕ್ತ ಬಿಡ್ಡುದಾರರು ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸ್ಥಾನಿಕ ಅಭಿಯಂತರು, ವಿತಾವಿ, ಬೆಳಗಾವಿ ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು. (ಫೋ: 0831-2498187)

ಸಹಿ/-
ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,
ಬೆಳಗಾವಿ.

*ಪ್ರತಿಯನ್ನು ಆದರಪೂರ್ವಕವಾಗಿ:*

1. ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಆದರಪೂರ್ವಕವಾಗಿ ಮತ್ತು ಜಿಲ್ಲಾ ಟೆಂಡರ ಬುಲೆಟಿನಲ್ಲಿ ಪ್ರಕಟಿಸಲು ಕೋರಲಾಗಿದೆ.
2. ನಿರ್ದೇಶಕರು, ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ, ವಾರ್ತಾ ಭವನ, ಬೆಳಗಾವಿ ಇವರಿಗೆ ಆದರಪೂರ್ವಕವಾಗಿ ಮತ್ತು ಸದರಿ ಟೆಂಡರನ್ನು ಕನ್ನಡ ದಿನ ಪತ್ರಿಕೆಯಲ್ಲಿ (ಬೆಳಗಾವಿ ಆವೃತ್ತಿಯಲ್ಲಿ ಮಾತ್ರ) ಟೆಂಡರನ್ನು 8"X 8" ಅಳತೆಯಲ್ಲಿ ಪ್ರಕಟಿಸಲು ಕೋರಲಾಗಿದೆ.

ಪ್ರತಿಯನ್ನು:

1) ಗೌರವಾನ್ವಿತ ಕುಲಪತಿಗಳು, ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ ವಿ.ತಾ.ವಿ., ಬೆಳಗಾವಿ ಇವರ ಮಾಹಿತಿಗಾಗಿ.
2) ವಿತ್ತಾಧಿಕಾರಿಗಳು, ವಿ.ತಾ.ವಿ., ಬೆಳಗಾವಿ ಇವರ ಮಾಹಿತಿಗಾಗಿ.
3) ಸ್ಥಾನಿಕ ಅಭಿಯಂತರು, ವಿ.ತಾ.ವಿ., ಬೆಳಗಾವಿ ಇವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
4) ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ ಇವರ ಮಾಹಿತಿಗಾಗಿ ಮತ್ತು ವಿ.ತಾ.ವಿ ಅಂತರ ಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ.
5) ಕಚೇರಿ ಸೂಚನಾ ಫಲಕಕ್ಕೆ.
6) ಕಡತಕ್ಕೆ.

05-06-17

ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,
ಬೆಳಗಾವಿ.